ದಿನಾಂಕ 21.02.2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು:- ಪ್ರತಿವಾದಿ 13 ರಿಂದ 17 ರವರುಗಳ ಪರ ವಕೀಲರಾದ ಶ್ರೀ ಡಿ.ಎಂ.ಕೆ ರವರಿಂದ:-**

ನಾನು ಭಾಗಾಂಶ ಕೋರಿ ಈ ದಾವೆಯನ್ನು ದಾಖಲಿಸಿರುತ್ತೇನೆ. ನಾನು ನಿರ್ದಿಷ್ಟವಾಗಿ ಎಷ್ಟು ಭಾಗ ಎಂದು ವಾದಪತ್ರದಲ್ಲಿ ಕೇಳಿರುವುದಿಲ್ಲ. ನಾನು ಏನು ಪರಿಹಾರ ಬೇಕೆಂದು ನನ್ನ ವಕೀಲರ ಬಳಿ ತಿಳಿಸಿದ್ದು, ಅದರಂತೆ ವಾದಪತ್ರದಲ್ಲಿ ನಮೂದಿಸಲಾಗಿರುತ್ತದೆ. ನಮ್ಮ ಯಾವ ಕುಟುಂಬಸ್ತರು ಯಾರಿಗೆ ಕ್ರಯಪತ್ರಗಳನ್ನು ಯಾವ ದಿನಾಂಕಗಳಂದು ಬರೆದುಕೊಟ್ಟಿದ್ದಾರೆ ಎಂದು ವಾದಪತ್ರದಲ್ಲಿ ನಿಖರವಾಗಿ ನಮೂದಿಸಿರುವುದಿಲ್ಲ. ನಾನು ಊರಿನ ಗ್ರಾಮಸ್ತರ ಪರವಾಗಿ ಈ ದಾವೆಯನ್ನು ಹೂಡಿರುವುದಿಲ್ಲ.

ನಮ್ಮ ಕುಟುಂಬದಲ್ಲಿ ಒಟ್ಟು ಮೂರು ಭಾಗಗಳಿವೆ. ನನ್ನ ತಂದೆಗೆ ನಾವು ಇಬ್ಬರು ಗಂಡು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು. ನನ್ನ ನಾಲ್ಕು ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಪ್ರತಿವಾದಿಗಳಿಗೆ ಸಹೋದರಿಯರು ಇರುವುದು ನನಗೆ ಗೊತ್ತಿಲ್ಲ. ನಮ್ಮ ಕುಳ ನಂಬರ್ 6 ರ ಸ್ವತ್ತುಗಳು ಪ್ರತಿವಾದಿಗಳ ಸ್ವಾಧೀನದಲ್ಲಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ. ಪ್ರತಿವಾದಿಗಳು 3 ನೇ ಕುಳಕ್ಕೆ ಸೇರಿದವರು. ಕುಳ ನಂಬರ್ 3 ಮತ್ತು 6 ರ ಕುಟುಂಬಸ್ತರ ನಡುವೆ ಪೂರ್ವಜರ ಕಾಲದಲ್ಲಿಯೇ ಆಸ್ತಿಗಳು ವಿಭಾಗವಾಗಿರುತ್ತವೆ. ನಮ್ಮ ಕುಳ ನಂಬರ್ 6 ರ ಪಾಲಿಗೆ ಬಂದಂತಹ ಸ್ವತ್ತುಗಳು ಕುಳ ನಂ. 3 ರ ಸದಸ್ಯರು ಅಕ್ರಮವಾಗಿ ಸ್ವಾಧೀನ

ಹೊಂದಿರುವುದರಿಂದ, ಅವರಿಂದ ಸ್ವಾಧೀನ ಪಡೆಯಲು ಈ ದಾವೆಯನ್ನು ಹೂಡಿರುತ್ತೇವೆ.

4ನೇ ವಾದಿಯಾದ ಕೆ.ಕೆ ಸೋಮಯ್ಯ, 6ನೇ ವಾದಿಯಾದ ಕೆ.ಎಸ್ ಸೋಮಯ್ಯ ಮತ್ತು 11ನೇ ವಾದಿಯಾದ ಕೆ.ಕೆ ಉತ್ತಯ್ಯರವರು ಮೃತರಾಗಿರುತ್ತಾರೆ. ಅವರುಗಳು ಮೃತರಾದ ದಿನಾಂಕ ನನಗೆ ನೆನಪಿಲ್ಲ. ಅವರುಗಳ ವಾರಸುದಾರರು ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 18 ನೇ ಪ್ರತಿವಾದಿಗೆ ರುಕ್ಮಿಣಿ, ಸುಶೀಲ ಮತ್ತು ಸುನಿತ ಎಂಬ ಮೂರು ಜನ ಹೆಣ್ಣು ಮಕ್ಕಳು ಇರುವ ಬಗ್ಗೆ ನನಗೆ ನೆನಪಿಲ್ಲ. ನಾನು ನ್ಯಾಯಾಲಯಕ್ಕೆ ವಂಶವೃಕ್ಷ ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ.

ನಮ್ಮ ಕುಟುಂಬದ ಮೂಲ ಪುರುಷನ ಹೆಸರು ನನಗೆ ನೆನಪಿಲ್ಲ. ಕುಳ ನಂ. 3, 4 ಮತ್ತು 6 ರ ಮೂಲ ಪುರುಷ ಮತ್ತು ಅವರುಗಳ ಮಕ್ಕಳ ಹೆಸರು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

**(ಸಾಕ್ಷಿದಾರರ ಸಹಿ)** ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. ೧೧/೨೦೧೪

ಪಿಡಬ್ಲ್ಯೂ -1